ಈ) ಈ ಹಿಂದೆ ಖಾಸಗಿ ಸಂಸ್ಥೆಯು ನೀಡಿದ್ದ ಪಡಿತರ ಚೀಟಿಗಳ ಪೈಕಿ, ಕಳೆದ ಕೆಲವು ತಿಂಗಳಲ್ಲಿ ನಗರ ಪ್ರದೇಶಗಳಲ್ಲಿ ಸುಮಾರು 12,25,500 ಪಡಿತರ ಚೀಟಿಗಳನ್ನು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು 6,08,600 ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ. ಈಗ "ಅನ್‌ಲೈನ್" ಆಗಿ ಸಲ್ಲಿಸಿದ ಅರ್ಜಿಗಳು ಇನ್ನೂ ಸ್ಥಳ ತಪಾಸಣೆಯಾಗಬೇಕಾಗಿರುವುದರಿಂದ, ಯಾವುದೇ ಬೇಡಿಕೆಯನ್ನು ತಿರಸ್ಕರಿಸಲಾಗಿರುವುದಿಲ್ಲ.

ರಾಜ್ಯದಲ್ಲಿ ವಿದ್ಯುತ್ ಅಭಾವವನ್ನು ಸರಿದೂಗಿಸಲು ತೆಗೆದುಕೊಂಡ ಕ್ರಮ

202 (511) ಶ್ರೀ ನರೇಂದ್ರಬಾಬು ನೆ.ಲ (ಮಹಾಲಕ್ಷ್ಮೀಲೇಜೌಟ್):– ಮಾನ್ಯ ಇಂಧನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ವಿದ್ಯುತ್ ಅಭಾವವನ್ನು ಸರಿದೂಗಿಸಲು ತೆಗೆದುಕೊಂಡಿರುವ ಕ್ರಮವೇನು;

ಆ) ಸರ್ಕಾರ ವಿದ್ಯುತ್ ಅಭಾವವನ್ನು ಸರಿದೂಗಿಸಲು ಖಾಸಗಿ ಕಂಪನಿಯವರಿಂದ ಎಷ್ಟು ಪ್ರಮಾಣದ ವಿದ್ಯುತ್ ಖರೀದಿಸುತ್ತಿದೆ; ಹಾಗೂ ಎಷ್ಟು ಹಣ ಖರ್ಚು ಮಾಡಲಾಗುತ್ತಿದೆ (ವಿವರ ನೀಡುವುದು);

ಇ) ರಾಯಚೂರು ಕಲ್ಲಿದ್ದಲು ವಿದ್ಯುತ್ ಸ್ಥಾವರಕ್ಕೆ ಸಾಕಷ್ಟು ಪ್ರಮಾಣದಲ್ಲಿ ಪೂರೈಕೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; ಹಾಗೂ ಎಲ್ಲಾ ವಿದ್ಯುತ್ ಸ್ಥಾವರಗಳು ಕಾರ್ಯಾಚರಣೆ ಮಾಡುತ್ತಿದೆಯೇ?

ಕು॥ ಶೋಭಾ ಕರಂದ್ಲಾಜೆ (ಮಾನ್ಯ ಇಂಧನ ಸಚಿವರು):–

ಅ) ರಾಜ್ಯದಲ್ಲಿನ ಎಲ್ಲಾ ಮೂಲಗಳ ಸ್ಥಾಪಿತ ವಿದ್ಯುತ್ ಸಾಮರ್ಥ್ಯವು 11773 ಮೆ.ವ್ಯಾ.ಗಳಾಗಿದ್ದು ಇವುಗಳಿಂದ ದಿನಂಪ್ರತಿ ಸುಮಾರು 125 ರಿಂದ 130 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತದೆ. ರಾಜ್ಯದ ವಿದ್ಯುತ್ ಬೇಡಿಕೆಯು 150 ರಿಂದ 160 ರಷ್ಟು ದಶಲಕ್ಷ ಯೂನಿಟ್‌ನಷ್ಟಿದೆ. ಪ್ರಸಕ್ತ ಸಾಲಿನ ಸೆಪ್ಟೆಂಬರ್ ಮತ್ತು ಅಕ್ಟೋಬರ್ 2011 ತಿಂಗಳುಗಳಲ್ಲಿ ಆರ್‌ಟಿಪಿಎಸ್‌ನ 4 ಘಟಕಗಳು ಸ್ಥಗಿತಗೊಂಡು, ಶಾಖೋತ್ಪನ್ನ ವಿದ್ಯುತ್ ಲಭ್ಯತೆಯಲ್ಲಿ ಕಡಿತ ಉಂಟಾಗಿರುತ್ತದೆ. ಇದೇ ಸಮಯದಲ್ಲಿ ಬಳ್ಳಾರಿಯ ಶಾಖೋತ್ಪನ್ನ ಘಟಕವನ್ನು ವಾರ್ಷಿಕ ನಿರ್ವಹಣಾ ಕೆಲಸಗಳಿಂದಾಗಿ ನಿಲ್ಲಿಸಲಾಗಿದ್ದು, ಆ ಘಟಕದಿಂದ ವಿದ್ಯುತ್ತಿನ ಪೂರೈಕೆಯೂ ನಿಂತಿರುತ್ತದೆ. ನೆರೆರಾಜ್ಯದ ತೆಲಂಗಾಣ ಚಳುವಳಿಯಿಂದ

ಆರ್‌ಟಿಪಿಎಸ್ ಘಟಕಗಳಿಗೆ ಕಲ್ಲಿದ್ದಲು ಪೂರೈಸುವಲ್ಲಿ ಅಡ್ಡಿ ಉಂಟಾಗಿದ್ದು, ಶರಾವತಿಯಲ್ಲಿ ಕಾಲುವೆ ಕಾಮಗಾರಿಗಳನ್ನು ಕೈಗೊಂಡಿರುವುದರಿಂದ, ಪೂರ್ಣ ಪ್ರಮಾಣದ ವಿದ್ಯುತ್ ಉತ್ಪಾದನೆಯಾಗಲಿಲ್ಲ. ಒಟ್ಟಾರೆಯಾಗಿ ಸುಮಾರು 1000 ಮೆ.ವ್ಯಾ.ನ ವಿದ್ಯುತ್ ಕೊರತೆ ಉಂಟಾಗಿರುತ್ತದೆ. ಸದ್ಯಕ್ಕೆ ಕಲ್ಲಿದ್ದಲು ಸರಬರಾಜಿನಲ್ಲಿ ಸುಧಾರಣೆಯಾಗಿದ್ದು ಆರ್‌ಟಿಪಿಎಸ್‌ನ ಏಳು ಘಟಕಗಳು ಪೂರ್ಣ ಪ್ರಮಾಣದಲ್ಲಿ ವಿದ್ಯುತ್ತನ್ನು ಉತ್ಪಾದಿಸುತ್ತಿದೆ. ಬಳ್ಳಾರಿ ಶಾಖಾತ್ಪೋನ ವಿದ್ಯುತ್ ಯೋಜನೆಯ ಮೂದಲನೇ ಘಟ್ಟಕವು ಪೂರ್ಣ ಪ್ರಮಾಣದಲ್ಲಿ ವಿದ್ಯುತ್‌ನ್ನು ಉತ್ಪಾದಿಸುತ್ತಿದ್ದು ಶರಾವತಿ ವಿದ್ಯುತ್ ಆಗರವನ್ನು ಹೊರತುಪಡಿಸಿ ಇನ್ನೂಳಿದ ಜಲವಿದ್ಯುತ್ ಘಟ್ಟಕಗಳು ಪೂರ್ಣ ಪ್ರಮಾಣದಲ್ಲಿ ವಿದ್ಯುತ್‌ನ್ನು ಉತ್ಪಾದಿಸುತ್ತಿವೆ.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ವಿದ್ಯುತ್ ಅಭಾವವನ್ನು ಸರಿದೂಗಿಸಲು ಈ ಕೆಳಕಂಡಂತೆ ಹೆಚ್ಚುವರಿ ವಿದ್ಯುತ್ ಅನ್ನು ಖರೀದಿ ಮಾಡಲಾಗುತ್ತಿದ್ದು, ಅದರ ವಿವರಗಳು ಈ ಕೆಳಕಂಡಂತಿದೆ:–

1. 1ನೇ ಸೆಪ್ಟಂಬರ್ 2011 ರಿಂದ 16ನೇ ಜೂನ್ 2013 ರವರೆಗೆ – ದಿನಂಪ್ರತಿ 780 ಮೆ.ವ್ಯಾ.:– ಈ ಪೈಕಿ 530 ಮೆ.ವ್ಯಾ.ಗಳಷ್ಟು ರಾಜ್ಯದ ಖಾಸಗೀ ವಿದ್ಯುತ್ ಉತ್ಪಾದಕರಿಂದಲೇ ಸರಬರಾಜಾಗುತ್ತಿದ್ದು, ಬಾಕಿ ಉಳಿದ 250 ಮೆ.ವ್ಯಾ.ಗಳಷ್ಟು ವಿದ್ಯುತ್ ಹೊರ ರಾಜ್ಯಗಳಿಂದ ಸರಬರಾಜಾಗಬೇಕಾಗಿದ್ದು ಅದಕ್ಕೆ ಕಾರಿಡಾರ್ ತೊಂದರೆ ಇರುವುದರಿಂದ ನವೆಂಬರ್ 2011ರ ಮಾಹೆಯಲ್ಲಿ ಯಾವುದೇ ವಿದ್ಯುತ್ ಪಡೆಯಲು ಸಾಧ್ಯವಾಗಿರುವುದಿಲ್ಲ. ಡಿಸೆಂಬರ್ 2011ರ ಮಾಹೆಯಲ್ಲಿ 72 ಮೆ.ವ್ಯಾ.ನಷ್ಟು ಹಾಗೂ ಜನವರಿ 2012ರ ಮಾಹೆಯಲ್ಲಿ 65 ಮೆ.ವ್ಯಾ.ನಷ್ಟು ವಿದ್ಯುತ್ ಲಭ್ಯವಾಗಲಿದೆ.

2. 1ನೇ ಆಕ್ಟೋಬರ್ 2011 ರಿಂದ 31ನೇ ಮೇ 2012 ರವರೆಗೆ – ಬೆಳಗಿನ ಮತ್ತು ಸಂಜೆಯ ಗರಿಷ್ಟ ಅವಧಿಗೆ: 430 ಮೆ.ವ್ಯಾ.:– ಸದರಿ ವಿದ್ಯುತ್ ಸಹ ಹೊರ ರಾಜ್ಯಗಳಿಂದ ಸರಬರಾಜಾಗಬೇಕಾಗಿದ್ದು, ಕಾರಿಡಾರ್ ತೊಂದರೆಯಿಂದ, ನವೆಂಬರ್ 2011ರ ಮಾಹೆಯಲ್ಲಿ 171 ಮೆ.ವ್ಯಾ. ಲಭ್ಯವಾಗಿದ್ದು, ಡಿಸೆಂಬರ್ 2011ರ ಮಾಹೆಯಲ್ಲಿ 208 ಮೆ.ವ್ಯಾ. ಮತ್ತು ಜನವರಿ 2012ರ ಮಾಹೆಯಲ್ಲಿ 221 ಮೆ.ವ್ಯಾ. ನಷ್ಟು ವಿದ್ಯುತ್ ಲಭ್ಯವಾಗಲಿದೆ.

3. 26ನೇ ನವೆಂಬರ್ 2011 ರಿಂದ 15ನೇ ಜೂನ್ 2012 ರವರೆಗೆ : ದಿನಂಪ್ರತಿ 210.10 ಮೆ.ವ್ಯಾ.

ಇದಲ್ಲದೇ 1ನೇ ಜೂನ್ 2012 ರಿಂದ 15ನೇ ಜೂನ್ 2013 ರವರೆಗೆ ಗುಜರಾತ್ ಸರ್ಕಾರದಿಂದ ದಿನಂಪ್ರತಿ 500 ಮೆ.ವ್ಯಾ. ವಿದ್ಯುತ್ ಖರೀದಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. 100 ಮೆ.ವ್ಯಾ. ವಿದ್ಯುತ್ ಅನ್ನು ದಿನಂಪ್ರತಿಯಾಗಿ ಜಮ್ಮು ಮತ್ತು ಕಾಶ್ಮೀರ ರಾಜ್ಯದಿಂದ 2021 ರವರೆಗೆ ಖರೀದಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ರಾಜ್ಯದಲ್ಲಿನ ವಿದ್ಯುತ್ ಅಭಾವವನ್ನು ಸರಿದೂಗಿಸುವ ನಿಟ್ಟಿನಲ್ಲಿ ಈ ಕೆಳಕಂಡ ವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಂಡಿದೆ.

ಖ) ಕಾಮಗಾರಿಗಳು ಚಾಲನೆಯಲ್ಲಿರುವ ಯೋಜನೆಗಳು:

ಅ) ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ ಘಟಕ–2 (500 ಮೆ.ವ್ಯಾ)

ಯೋಜನೆಯ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಘಟಕವು ಡಿಸೆಂಬರ್ 2011ರ ವೇಳೆಗೆ ಕಾರ್ಯಾರಂಭಗೊಳ್ಳುವ ನಿರೀಕ್ಷೆಯಿದೆ.

ಆ) ಯರಮರಸ್ ಶಾ.ವಿ.ಕೇಂದ್ರ (2 x 800 ಮೆ ವ್ಯಾ)*

ದಿನಾಂಕ: 09–04–2010 ರಂದು ಬಿಟಿಜಿ ಹಾಗೂ ಇತರೆ ಪ್ರಮುಖ ಪ್ಯಾಕೇಜ್‌ಗಳಿಗಾಗಿ ಮೆ: ಬಿಹೆಚ್‌ಇಎಲ್ ರವರಿಗೆ ಆದೇಶ ಪತ್ರ (LOA) ನೀಡಲಾಗಿದೆ, ಕೂಲಿಂಗ್ ಟವರ್, ಆರ್‌ಸಿ ಚಿಮಣಿ, ಯಾಂತ್ರಿಕ / ಸಿವಿಲ್ ಕಾಮಗಾರಿಗಳು ಹಾಗೂ ಸ್ಥಾವರಕ್ಕಾಗಿ ನೀರಿನ ವ್ಯವಸ್ಥೆಯ ಕಾಮಗಾರಿಗಳಿಗಾಗಿ ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

ಇ) ಯದ್ಲಾಪುರ ಶಾ.ವಿ. ಕೇಂದ್ರ (1 x 800 ಮೆ ವ್ಯಾ)*

ದಿನಾಂಕ: 25–09–2010 ರಂದು ಮೆ:ಬಿ ಹೆಚ್‌ಇಎಲ್ ರವರಿಗೆ ಅನುಮತಿ ಪತ್ರ (LOI) ನೀಡಲಾಗಿದೆ. ಯೋಜನೆಗಾಗಿ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದಿಂದ ಅನುಮತಿಯನ್ನು ನಿರೀಕ್ಷಿಸಲಾಗಿದ್ದು, ಅನುಮತಿ ದೊರೆತ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಈ) ಬಳ್ಳಾರಿ ಶಾ.ವಿ. ಕೇಂದ್ರ, 3ನೇ ಘಟಕ (700 ಮೆ ವ್ಯಾ)

ಸಂಧಾನದ ನಂತರ ಒಪ್ಪಿದ ಮೊತ್ತವಾದ 3700 ಕೋಟಿ ರೂ. ಗಳ ಕಾಮಗಾರಿಗಳಿಗಾಗಿ ಇ.ಪಿ.ಸಿ. ಆಧಾರದ ಮೇಲೆ ದಿನಾಂಕ: 28–09–2010 ರಂದು

ಮೆ: ಬಿಹೆಚ್ಇಎಲ್ ರವರಿಗೆ ಆದೇಶ ಪತ್ರ (LOA) ನೀಡಲಾಗಿದೆ. ಭೂಮಿಯನ್ನು ಸಮತಟ್ಟುಗೊಳಿಸುವ ಕಾರ್ಯವು ಪ್ರಗತಿಯಲ್ಲಿದೆ.

ಉ) ರಾಯಚೂರು ಜಿಲ್ಲೆಯಲ್ಲಿನ ಸೋಲರ್ ಫೋಟೊ ವೊಲ್ಟಾಯಿಕ್ ಯೋಜನೆ (3 ಮೆ.ವ್ಯಾ.)

ರಾಯಚೂರು ಜಿಲ್ಲೆಯ ಯಾಪಲದಿನ್ನಿಯಲ್ಲಿನ 3 ಮೆ.ವ್ಯಾ. ಸಾಮರ್ಥ್ಯದ ಯೋಜನೆಯ ಅನುಷ್ಠಾನ ಕಾರ್ಯವು ಪೂರ್ಣಗೊಂಡಿದ್ದು, ವಿದ್ಯುತ್ ತೆರವಿಗೆ ಒಪ್ಪಿಗೆ ದೊರೆತ ನಂತರ ಕಾರ್ಯಾರಂಭ ಗೊಳಿಸಲಾಗುವುದು.

ಊ) ಶಿವನಸಮುದ್ರಂ ಸೋಲಾರ್ ವಿದ್ಯುತ್ ಯೋಜನೆ (5 ಮೆ.ವ್ಯಾ.)

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ರಾಷ್ಟ್ರೀಯ ವಿದ್ಯುತ್ ವ್ಯಾಪಾರ ನಿಗಮ ನಿಯಮಿತದ (NVVNL) ಸ್ಪರ್ಧಾತ್ಮಕ ಸವಾಲಿನಲ್ಲಿ ಶಿವನಸಮುದ್ರದ 5 ಮೆ.ವ್ಯಾ. ಸಾಮರ್ಥ್ಯದ ಸೋಲಾರ್ ವಿದ್ಯುತ್ ಯೋಜನೆಯನ್ನು ಪಡೆದುಕೊಂಡಿದೆ. ಸ್ಥಾವರದ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಮಾರ್ಚಿ 2012 ರ ವೇಳೆಗೆ ಕಾರ್ಯಾರಂಭಗೊಳಿಸಲು ಉದ್ದೇಶಿಸಲಾಗಿದೆ.

1) ಇಷ್ಟಲ್ಲದೆ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲು ಯೋಜಿಸಿದೆ.

ಅ) ಛತ್ತೀಸ್‌ಗಡ್ ಪಿಟ್–ಹೆಡ್ ಶಾಖೋತ್ಪನ್ನ ವಿದ್ಯುತ್ ಯೋಜನೆ (1600 ಮೆ ವ್ಯಾ)**

* ಮೆ: ಬಿಹೆಚ್ಇಎಲ್ ರವರ ಸಹಭಾಗಿತ್ವದೊಂದಿಗೆ

** ಮೆ: ಎಲ್ ಅಂಡ್ ಟಿ ರವರ ಸಹಭಾಗಿತ್ವದೊಂದಿಗೆ

ಆ) ತದಡಿ ಸಂಯುಕ್ತ ಆವರ್ತಕ ವಿದ್ಯುತ್ ಯೋಜನೆ (2100 ಮೆ. ವ್ಯಾ)

ಇ) ಬಿಡದಿ ಸಂಯುಕ್ತ ಆವರ್ತಕ ವಿದ್ಯುತ್ ಯೋಜನೆ (700 ಮೆ. ವ್ಯಾ ±20%)

ಈ) ಗುಂಡ್ಯಾ ಜಲವಿದ್ಯುತ್ ಯೋಜನೆ (2 x 200 ಮೆ.ವ್ಯಾ)

ಉ) ಶಿವಸಮುದ್ರಂ ಜಲವಿದ್ಯುತ್ ಯೋಜನೆ (345 ಮೆ.ವ್ಯಾ)

ಊ) ಮುನಿರಾಬಾದ್ ಜಲ ವಿದ್ಯುತ್ ಕೇಂದ್ರದ ಹೆಚ್ಚುವರಿ ಘಟಕ

(1 x 10 ಮೆ ವ್ಯಾ)

ಋ) ಘಟಪ್ರಭ (20 ಮೆ ವ್ಯಾ)

ವಿದ್ಯುತ್ ಅಭಾವವನ್ನು ಸರಿದೂಗಿಸಲು ಖಾಸಗಿ ಕಂಪನಿಯವರಿಂದ ಏಪ್ರಿಲ್ 2011 ರಿಂದ ಅಕ್ಟೋಬರ್ 2011ರ ಅಂತ್ಯದವರೆಗೆ 2892.58 ದಶಲಕ್ಷ ಯೂನಿಟ್ ವಿದ್ಯುತ್ ಖರೀದಿ ಮಾಡಿದ್ದು, ಇದಕ್ಕಾಗಿ 1409.88 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಆ) ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರಕ್ಕೆ ಕಲ್ಲಿದ್ದಲನ್ನು ಖರೀದಿಸಲು ಈ ಕೆಳಗೆ ತಿಳಿಸಿರುವ ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಅ) ದೇಶೀಯ ಕಲ್ಲಿದ್ದಲು (Domestic Coal):

ದೇಶೀಯ ಕಲ್ಲಿದ್ದಲು ಖರೀದಿಗಾಗಿ ಈ ಕೆಳಕಂಡ ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಸಂಸ್ಥೆಯ ಹೆಸರು	ಒಡಂಬಡಿಕೆ ದಿನಾಂಕ	ಅವಧಿ	ವಾರ್ಷಿಕ ಪ್ರಮಾಣ (ಲಕ್ಷ ಮೆಟ್ರಿಕ್‌ಟನ್)	ಷರಾ
ಸಿಂಗರೇಣಿ ಕೋಲರೀಸ್ ಕಂಪನಿ ಲಿಮಿಟೆಡ್ (SCCL)	06.03. 2009	ದಿನಾಂಕ 01–04–2009 ರಿಂದ ಐದು ವರ್ಷಗಳ ವರೆಗೆ	30.10	
ವೆಸ್ಟರ್ನ್ ಕೋಲ್‌ಫೀಲ್ಡ್ಸ್ ಲಿಮಿಟೆಡ್ (WCL)	14–10 2009	ದಿನಾಂಕ 01–04–2009 ರಿಂದ ಇಪ್ಪತ್ತು ವರ್ಷಗಳ ವರೆಗೆ	24.75	

ಮಹಾನದಿ ಕೋಲ್‌ಫೀಲ್ಡ್ಸ್ ಲಿಮಿಟೆಡ್ (MCL)	17.09 2009	ದಿನಾಂಕ 01–04–2009 ರಿಂದ ಇಪ್ಪತ್ತು ವರ್ಷಗಳ ವರೆಗೆ	16.35	
ಮಹಾನದಿ ಕೋಲ್‌ಫೀಲ್ಡ್ಸ್ ಲಿಮಿಟೆಡ್ (MCL)for Unit-8 RTPS	05.05 2010	ದಿನಾಂಕ 21–06–2010 ರಿಂದ ಐದು ವರ್ಷಗಳ ವರೆಗೆ	10.11	ದಿನಾಂಕ 05–05–10ರ MOU ಪ್ರಕಾರ ಪೂರೈಕೆಯು 5.05 ಲಕ್ಷ ಮೆಟ್ರಿಕ್ ಟನ್‌ಗಳಿಗೆ ಮಾತ್ರ ಸೀಮಿತವಾಗಿರುತ್ತದೆ.
		ಒಟ್ಟು	**81.31**	

ಆ) ಆಮದು ಕಲ್ಲಿದ್ದಲು (Imported Coal):–

ಆಮದು ಕಲ್ಲಿದ್ದಲು ಖರೀದಿಗಾಗಿ ಮೆ: ಗುಪ್ತಾ ಕೋಲ್ (ಇಂಡಿಯಾ) ಲಿಮಿಟೆಡ್, ನಾಗಪುರರವರೊಂದಿಗೆ ಈ ಕೆಳಗಿನಂತೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಸಂಸ್ಥೆ ಹೆಸರು	ಒಡಂಬಡಿಕೆ ದಿನಾಂಕ	ಅವಧಿ	ವಾರ್ಷಿಕ ಪ್ರಮಾಣ (ಲಕ್ಷ ಮೆಟ್ರಿಕ್‌ಟನ್)	ಷರಾ
ಮೆ.ಗುಪ್ತಾ ಕೋಲ್ (ಇಂಡಿಯಾ) ನಾಗಪುರ	08.06.2010	2010–11 ನೇ ಸಾಲಿಗೆ	9.00	ಈ ಒಡಂಬಡಿಕೆಯ ಪೂರೈಕೆಯು ಪೂರ್ಣಗೊಂಡಿದೆ.
ಮೆ.ಗುಪ್ತಾ ಕೋಲ್ (ಇಂಡಿಯಾ) ಲಿಮಿಟೆಡ್, ನಾಗಪುರ	08.10.2010	2010–11ನೇ ಸಾಲಿಗೆ	5.00	ಈ ಒಡಂಬಡಿಕೆಯ ಪೂರೈಕೆಯು ಪೂರ್ಣಗೊಂಡಿದೆ.

ಮೆ.ಗುಪ್ತಾ ಕೋಲ್ ಲಿಮಿಟೆಡ್, ನಾಗಪುರ	04.07.2007	2011–12ನೇ ಸಾಲಿಗೆ	10.00	ಈ ಒಡಂಬಡಿಕೆಯ ಪೂರೈಕೆಯು ಚಾಲ್ತಿಯಲ್ಲಿದೆ.

ಹೆಚ್ಚುವರಿಯಾಗಿ 5.00 ಲಕ್ಷ ಮೆಟ್ರಿಕ್ ಟನ್ ಆಮದು ಕಲ್ಲಿದ್ದಲು ಖರೀದಿಗಾಗಿ ಟೆಂಡರ್ ಕರೆಯಲಾಗಿದೆ. ಈ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ.

ಕರ್ನಾಟಕ ವಿದ್ಯುತ್ ನಿಗಮದ ಕಲ್ಲಿದ್ದಲು ಸರಬರಾಜಿನ ಸ್ವೀಕೃತಿ ಹಾಗೂ ವಿದ್ಯುತ್ ಉತ್ಪಾದನೆಯ ವಾಸ್ತವಾಂಶಗಳು ಈ ರೀತಿ ಇದೆ.

ಕ.ವಿ.ನಿ. ನಿಯಮಿತವು ಹೆಚ್ಚಿಗೆ ಕಲ್ಲಿದ್ದಲಿನ ಪೂರೈಕೆಗಾಗಿ ಮಹಾರಾಷ್ಟ್ರದ ವೆಸ್ಟರ್ನ್ ಕೋಲ್‌ಫೀಲ್ಡ್ಸ್ ಲಿಮಿಟೆಡ್, (ಡಬ್ಲ್ಯೂ.ಸಿ.ಎಲ್) ರವರನ್ನು ಕೋರಲಾಗಿತ್ತು. ಅದರಂತೆ ವೆಸ್ಟರ್ನ್ ಕೋಲ್‌ಫೀಲ್ಡ್ ಲಿಮಿಟೆಡ್, (ಡಬ್ಲ್ಯೂ.ಸಿ.ಎಲ್) ನವರು ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ 2011ರಲ್ಲಿ ಕಲ್ಲಿದ್ದಲು ಸರಬರಾಜು ಒಪ್ಪಂದದ ಪ್ರಮಾಣಕ್ಕಿಂತ ಹೆಚ್ಚು ಕಲ್ಲಿದ್ದಲನ್ನು ಪೂರೈಸಿರುತ್ತಾರೆ.

ಆಮದು ಕಲ್ಲಿದ್ದಲಿನ ನಿಗದಿತ ಮಾಸಿಕ ಪೂರೈಕೆಯ ಪ್ರಮಾಣವನ್ನು ಹೆಚ್ಚುಗೊಳಿಸಿ ಅದರಂತೆ ಹೆಚ್ಚುವರಿ ಆಮದು ಕಲ್ಲಿದ್ದಲನ್ನು ಸಹ ಪಡೆಯಲಾಗುತ್ತಿದೆ.

ಕರ್ನಾಟಕ ಸರ್ಕಾರ ಹಾಗೂ ಕರ್ನಾಟಕ ವಿದ್ಯುತ್ ನಿಗಮವು ಮಾಡಿದ ನಿರಂತರ ಪ್ರಯತ್ನಗಳ ನಂತರವೂ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ ಮೆ: ಸಿಂಗರೇಣಿ ಕೋಲ್‌ಫೀಲ್ಡ್ಸ್ ಕಂಪನಿ ಲಿಮಿಟೆಡ್ (SCCL) ಮತ್ತು ಮೆ: ಮಹಾನದಿ ಕೋಲ್‌ಫೀಲ್ಡ್ಸ್ ಲಿಮಿಟೆಡ್ (MCL) ನಿಂದ ಕಲ್ಲಿದ್ದಲಿನ ಸರಬರಾಜಿನಲ್ಲಿ ಕೊರತೆ ಉಂಟಾಗಿದೆ.

ಪ್ರತ್ಯೇಕ ತೆಲಂಗಾಣ ರಾಜ್ಯ ಹೋರಾಟ ಚಳುವಳಿಯ ಕಾರಣದಿಂದ ಮೆ: ಸಿಂಗರೇಣಿ ಕೋಲ್ ಫೀಲ್ಡ್ಸ್ ಕಂಪನಿ ಲಿಮಿಟೆಡ್ ನಿಂದ ದಿನಾಂಕ: 13–09–2011 ರಿಂದ 18–10–2011 ರವರೆಗೆ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ ಕಲ್ಲಿದ್ದಲು ಸರಬರಾಜು ಸಂಪೂರ್ಣ ಸ್ಥಗಿತವಾಗಿತ್ತು.

2011ರ ಏಪ್ರಿಲ್ ನಿಂದ 29ನೇ ನವೆಂಬರ್ 2011 ಅವಧಿಯಲ್ಲಿ ಕ.ವಿ.ನಿಗಮಕ್ಕೆ ಮೆ: ಎಸ್.ಸಿ.ಸಿ.ಎಲ್ ಮತ್ತು ಮೆ: ಎಂ.ಸಿ.ಎಲ್ ರವರಿಂದ ಕ್ರಮವಾಗಿ ಕಲ್ಲಿದ್ದಲಿನ

ಒಡಂಬಡಿಕೆಯ ಶೇ.61.45 ರಷ್ಟು ಮತ್ತು ಶೇ.62.07 ರಷ್ಟು ಕಲ್ಲಿದ್ದಲು ಸ್ವೀಕೃತಿಯಾಗಿದೆ.

ಕಲ್ಲಿದ್ದಲಿನ ಗಣಿಗಳಿಗೆ/ರೈಲ್ವೆ ಇಲಾಖೆಗಳಿಗೆ ಕಲ್ಲಿದ್ದಲಿನ ಖರೀದಿ/ಸಾಗಾಣಿಕೆಗಾಗಿ ಹಣದ ಬಟವಾಡೆಯಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ / ಸರ್ಕಾರವು ವಿವಿಧ ಹಂತಗಳಲ್ಲಿ ಪತ್ರ ಮುಖೇನ ಹಾಗೂ ಮಾತುಕತೆಗಳ ಮೂಲಕ ಕಲ್ಲಿದ್ದಲಿನ ಗಣಿ, ಕಲ್ಲಿದ್ದಲು ಸಚಿವಾಲಯ, ಇಂಧನ ಸಚಿವಾಲಯ, ಹಾಗೂ ರೈಲ್ವೆ ಮಂತ್ರಾಲಯಗಳನ್ನು ಸಂಪರ್ಕಿಸಿದೆ.

2010–11 ರ ಏಪ್ರಿಲ್ 2010 ರಿಂದ ಆಕ್ಟೋಬರ್ 2010 ನಿಗಮವು 11623 ದ.ಲ. ಯೂನಿಟ್ ಗಳಷ್ಟು ವಿದ್ಯುತ್ ಉತ್ಪಾದಿಸಿತ್ತು. ಈ ವರ್ಷ 2011ರ ಏಪ್ರಿಲ್ ರಿಂದ ಆಕ್ಟೋಬರ್ 2011 ವರೆಗೆ ನಿಗಮವು ಒಟ್ಟು 15260 ದ.ಲ. ಯೂನಿಟ್ ಗಳಷ್ಟು ವಿದ್ಯುತ್ ಉತ್ಪಾದಿಸಿದೆ. ಈ ಮೂಲಕ ನಿಗಮವು ಈ ವರ್ಷ ಮೇಲ್ತಿಳಿಸಿದ ಅವಧಿಯಲ್ಲಿ ಶೇ.31ರಷ್ಟು ಹೆಚ್ಚುವರಿ ವಿದ್ಯುತ್ ಉತ್ಪಾದಿಸಿದೆ.

2010–11ರ ಏಪ್ರಿಲ್ 2010 ರಿಂದ ಆಕ್ಟೋಬರ್ 2010 ವರೆಗೆ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ ಒಟ್ಟು 4211 ದ.ಲ. ಯೂನಿಟ್ ಗಳಷ್ಟು ವಿದ್ಯುತ್ ಉತ್ಪಾದಿಸಿತ್ತು. ಈ ವರ್ಷ 2011ರ ಏಪ್ರಿಲ್ ರಿಂದ ಆಕ್ಟೋಬರ್ 2011 ವರೆಗೆ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ ಒಟ್ಟು 5440 ದ.ಲ. ಯೂನಿಟ್ ಗಳಷ್ಟು ವಿದ್ಯುತ್ ಉತ್ಪಾದಿಸಿದೆ ಇದರಿಂದಾಗಿ ವಿದ್ಯುತ್ ಉತ್ಪಾದನೆಯಲ್ಲಿ ಶೇ.29 ರಷ್ಟು ಹೆಚ್ಚಳವಾಗಿರುತ್ತದೆ.

ಕೇಂದ್ರಿಯ ವಿದ್ಯುತ್ ಪ್ರಾಧಿಕಾರವು ವಿದ್ಯುತ್ ಉತ್ಪಾದನೆಯನ್ನು ಕುರಿತು ದಿನಾಂಕ: 17–11–2011 ರಂದು ಬಿಡುಗಡೆಗೊಳಿಸಿರುವ ತನ್ನ ವರದಿಯಲ್ಲಿ ಆಂಧ್ರ ಪ್ರದೇಶದಲ್ಲಿ ಪ್ರತ್ಯೇಕ ತೆಲಂಗಾಣ ರಾಜ್ಯದ ಕುರಿತಾದ ಚಳುವಳಿಯು ತೀವ್ರಗೊಂಡ ಕಾರಣ ಸೆಪ್ಟಂಬರ್ ಹಾಗೂ ಅಕ್ಟೋಬರ್ ತಿಂಗಳುಗಳಲ್ಲಿ ಆಂಧ್ರ ಪ್ರದೇಶದ ಸಿಂಗರೇಣಿ ಕಲ್ಲಿದ್ದಲು ಗಣಿಗಳಲ್ಲಿನ ಕೆಲಸವು ಸ್ಥಗಿತಗೊಂಡಿತ್ತು. ಈ ಕಾರಣದಿಂದಾಗಿ ಕರ್ನಾಟಕ ವಿದ್ಯುತ್ ನಿಗಮದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರವೂ ಸೇರಿದಂತೆ ಎನ್.ಟಿ.ಪಿ.ಸಿ ಹಾಗೂ ಕೊತ್ತುಗುಡಂ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳಿಗೆ ಸರಬರಾಜಾಗಬೇಕಾಗಿದ್ದ ಕಲ್ಲಿದ್ದಲಿನ ಪ್ರಮಾಣದಲ್ಲಿ ವ್ಯತ್ಯಯ ಉಂಟಾಗಿ ವಿದ್ಯುತ್ ಉತ್ಪಾದನೆಯ ಮೇಲೆ ತೀವ್ರ ಪರಿಣಾಮ ಬೀರಿತು ಎಂದು ತಿಳಿಸಿದೆ.

ದಿನಾಂಕ: 30-11-2011 ರಂತೆ ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದಲ್ಲಿ 8ನೇ ಘಟಕವನ್ನು ಹೊರತುಪಡಿಸಿ ಎಲ್ಲಾ ಘಟಕಗಳೂ ಕಾರ್ಯಾನಿರ್ವಹಿಸುತ್ತಿವೆ 8ನೇ ಘಟಕವನ್ನು ಸಧ್ಯದಲ್ಲಿಯೇ ಚಾಲನೆಗೊಳಿಸಲಾಗುವುದು.

ವಸತಿ ಯೋಜನೆಯಡಿ ನಿರ್ಮಿಸಿದ ಮನೆಗಳು

203 (337) ಶ್ರೀ ಪಾಟೀಲ್ ವಿ.ಎಸ್ (ಯಲ್ಲಾಪುರ):- ಮಾನ್ಯ ವಸತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಉತ್ತರ ಕನ್ನಡ ಜಿಲ್ಲೆ ಮುಂಡಗೋಡ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ವಸತಿ ಯೋಜನೆ ಅಡಿ ಮಂಜೂರಾತಿ ಪಡೆದ ಫಲಾನುಭವಿಗಳ ವಿವರ ನೀಡುವುದು?

ಶ್ರೀ ವಿ. ಸೋಮಣ್ಣ (ಮಾನ್ಯ ವಸತಿ ಸಚಿವರು):-

ಅ) <u>ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ:</u>

ಉತ್ತರ ಕನ್ನಡ ಜಿಲ್ಲೆಯಲ್ಲಿ ಬರುವ ಮುಂಡಗೋಡ ತಾಲ್ಲೂಕಿನಲ್ಲಿ ವಿವಿಧ ವಸತಿ ಯೋಜನೆಯಡಿ 2008-09, 2009-10, 2010-11ನೇ ವರ್ಷದಲ್ಲಿ ಒಟ್ಟು 1968 ಮನೆಗಳನ್ನು ಮಂಜೂರು ಮಾಡಲಾಗಿದೆ. ಯೋಜನಾವಾರು ಹಾಗೂ ವರ್ಷಾವಾರು ವಿವರಗಳನ್ನು ಈ ಕೆಳಗೆ ನೀಡಲಾಗಿದ್ದು, ಫಲಾನುಭವಿಗಳ ವಿವರಗಳನ್ನು ಅನುಬಂಧ 'ಅ', 'ಆ', 'ಇ', 'ಈ', ಮತ್ತು 'ಉ' ಗಳಲ್ಲಿ ಲಗತ್ತಿಸಿದೆ.

ಯೋಜನೆ	ವಿವಿಧ ಸಾಲಿನಲ್ಲಿ ನೀಡಲಾಗಿರುವ ಮನೆಗಳು				ಅನುಬಂಧ
	08-09	09-10	10-11	ಒಟ್ಟು	
ಗ್ರಾಮೀಣ ಆಶ್ರಯ	256	-	-	256	'ಅ'
ಬಸವ ವಸತಿ ಯೋಜನೆ	-	-	757	757	'ಆ'
ಗ್ರಾಮೀಣ ಅಂಬೇಡ್ಕರ್	13	-	-	13	'ಇ'
ವಿಶೇಷ ವರ್ಗದ ಯೋಜನೆ (ಅಲೆಮಾರಿ ಜನಾಂಗ)	-	-	6	6	'ಈ'
ಇಂದಿರಾ ಆವಾಸ್ ಯೋಜನೆ	434	502	-	936	'ಉ'
ಒಟ್ಟು	**703**	**502**	**763**	**1968**	